ಶ್ರೀ ಬಿ. ಸೋಮಶೇಖರ್.—ಇದುವರೆಗೆ ಎಷ್ಟು ಈ ರೀತಿಯ ಇಂಗ್ಲೀಷ್ ವಿಾಡಿಯಂ ಶಾಲೆಗಳಿವೆ ಅದನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಅವುಗಳನ್ನು ಹೆಚ್ಚು ಮಾಡಲಿವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗಿರುವ ಶಾಲೆಗಳಿಗೆ ೫ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಶಾಲೆಗಳನ್ನು ಪ್ರಾರಂಭಿಸಲು ಅನುಮತಿಯನ್ನು ಕೊಡುತ್ತೇವೆ ಎಂದು ಹೇಳಂತ್ತಿದ್ದೀರಿ. ಅದೇ ಒಂದರಿಂದ ಐದನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಕೊಡುವುದಕ್ಕೆ ನೀವು ಏತಕ್ಕೆ ಹೆದರುತ್ತಿದ್ದೀರಿ ?

ಶ್ರೀ ಬಿ. ಸೋಮಶೇಖರ್.—ಈಗ ಐದರಿಂದ ಏಳನೇ ತರಗತಿಯವರೆಗೆ ಎಲ್ಲೆಲ್ಲಿ ನಡೆಯುತ್ತಿದೆ, ಅಲ್ಲಿ ಅರ್ಹತೆಯ ಆಧಾರದ ಮೇಲೆ ಮುಂದಕ್ಕೆ ಅಂದರೆ ೮ ರಿಂದ ೧೦ರವರೆಗೆ ಇಂಗ್ಲೀಷ್ ವಿಾಡಿಯಂ ಪ್ರಾರಂಭಿಸಲು ಅನುಮತಿ ಕೊಡುತ್ತೇವೆ. ಇನ್ನು ಕೆಳಗಡೆ ಇರತಕ್ಕಂಥ ತರಗತಿಗಳಿಗೆ ಇಂಗ್ಲೀಷ್ ವಿಾಡಿಯಂ ಪ್ರಾರಂಭಿಸಲು ಅನುಮತಿ ಕೊಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಕಿತ್ತೂರು ರಾಣಿ ಚೆನ್ನಮ್ಮ ರೆಸಿಡೆನ್ಷಿಯಲ್ ಸ್ಕೂಲ್ ಇದೆ. ಅಲ್ಲಿ ೫ ರಿಂದ ೧೦ನೇ ತರಗತಿಯವರೆಗೆ ಇಂಗ್ಲೀಷ್ ಮಾಡಿಯಂಗೆ ಅನುಮತಿ ಕೊಟ್ಟಿದ್ದೀರಿ. ಅಲ್ಲಿ ೧ ರಿಂದ ೫ನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಕೊಡುವುದಕ್ಕೆ ಪ್ರತಿಬಂಧಕ ಹಾಕಿದರೆ, ಅಲ್ಲಿ ಹೋಗತಕ್ಕಂಥ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರತಿಬಂಧಕ ಹಾಕಿದಹಾಗೆ ಆಗುವುದಿಲ್ಲವೇ ? ಇಂತಹ ಶಾಲೆಗಳಿಗೆ ಒಂದರಿಂದ ಐದನೇ ತರಗತಿಯವರೆಗೆ ಇಂಗ್ಲೀಷ್ ವಿಾಡಿಯಂ ಪ್ರಾರಂಭಿಸಲು ಅನುಮತಿ ಕೊಡಲೇ ಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಪ್ರತ್ಯೇಕವಾಗಿ ಯಾವ ಒಂದು ಶಾಲೆಯನ್ನು ಪರಿಗಣಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಭಾಷಾ ನೀತಿಯ ಪ್ರಕಾರ ಹೊಸ ಶಾಲೆಗಳಿಗೆ ಅನುಮತಿಯನ್ನು ಕೊಡತಕ್ಕಂಥಾದ್ದು ಇಲ್ಲ.

ರಾಜ್ಯದಲ್ಲಿ ಕ್ಯಾಪಿಟೇಷನ್ ಆಧಾರಿತ ಕಾಲೇಜುಗಳು

೧೩೫೮. ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರದವರು ಕ್ಯಾಪಿಟೇಷನ್ ಆಧಾರಿತ ಕಾಲೇಜುಗಳನ್ನು ಹಂತ ಹಂತವಾಗಿ ಡಿಮೆಗೊಳಿಸುವುದಾಗಿ ಹೇಳಿದ್ದು ನಿಜವಲ್ಲವೇ ?

ಆ) ಈಗ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ (ಅಫಿಲಿಯೇಷನ್) ಹೊಂದಲು ಎಷ್ಟು ಖಾಸಗಿ ಕಾಲೇಜಗಳು ಅರ್ಜಿ ಸಲ್ಲಿಸಿವೆ ?

ಇ) ಈ ಅರ್ಜಿಗಳಿಗೆ ಸಂಯೋಜನಾ ಸಮಿತಿ ಶಿಫಾರಸ್ಸು ನೀಡಿದೆಯೇ ಹಾಗಿದ್ದಲ್ಲಿ ಎಷ್ಟು ಕಾಲೇಜುಗಳಿಗೆ ಹಾಗೂ ಸದರಿ ಸ್ಥಳಗಳಾವುವು ?

ಈ) ಕ್ಯಾಪಿಟೇಷನ್ ಆಧಾರಿತ ಹೊಸ ಕಾಲೇಜುಗಳನ್ನು ಸರ್ಕಾರದವರು ಮಾನ್ಯ ಮಾಡುತ್ತಾರೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲ್ಲ. ದಿನಾಂಕ ೧೧-೭-೧೯೮೮ರ ನಂತರ ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಷನ್ ಫೀ ರದ್ದತಿ) ಕಾಯ್ದೆ ೧೯೮೮ರ ಪ್ರಕಾರ ಯಾವುದೇ ವಿದ್ಯಾ ಸಂಸ್ಥೆ ಕ್ಯಾಪಿಟೇಷನ್ ಫೀ ವಸೂಲು ಮಾಡುವ ಹಾಗಿಲ್ಲ.

ಆ) ೧೨ (ಹನ್ನೆರಡು)

ಇ) ೭ ಕಾಲೇಜುಗಳಿಗೆ ಮಾತ್ರ ಶಿಫಾರಸ್ಸು ನೀಡಿದೆ (ಏಳು) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಈ) ಯಾವುದೇ ಕಾಲೇಜನ್ನು ಕ್ಯಾಪಿಟೇಷನ್ ಆಧಾರಿತ ಕಾಲೇಜೆಂದು ಪರಿಗಣಿಸಲಾಗಿ ಮಾಡುವುದಿಲ್ಲ.

ಅನುಬಂಧ

೧. ಶ್ರೀ ದುರ್ಗಾ ಪರಮೇಶ್ವರಿ ದೇವಳ ವಿದ್ಯಾ ಸಂಸ್ಥೆ, ಪ್ರಥಮ ದರ್ಜೆ ಕಾಲೇಜು, ಮಂಗಳೂರು

೨. ಶ್ರೀ ವೆಂಕಟರಮಣ ಮಹಿಳಾ ಪ್ರಥಮ ದರ್ಜೆ ಕಾಲೇಜು, ಕಾರ್ಕಳ

೩. ಡಾ॥ ಎಸ್.ಎಸ್.ಎ,ಎಂ. ಪ್ರಥಮ ದರ್ಜೆ ಕಾಲೇಜು, ನಿಟ್ಟೆ, ದಕ್ಷಿಣ ಕನ್ನಡ ಜಿಲ್ಲೆ

೪. ಮಂಗಳೂರು ಮ್ಯಾನೇಜ್‌ಮೆಂಟ್ ಕಾಲೇಜು, ಮಂಗಳೂರು

೫. ಕಾಲೇಜ್ ಆಫ್ ಮೆಡಿಸನ್, ದೇರಳಕಟ್ಟೆ, ಮಂಗಳೂರು

೬. ಪ್ರಥಮ ದರ್ಜೆ ಕಾಲೇಜು, ಕುದ್ರೋಳಿ, ಮಂಗಳೂರು

೭. ಇನ್ಸಿಟ್ಯೂಟ್ ಆಫ್ ಪ್ರೊಫೆಷನಲ್ ಸೈನ್ಸ್ ಮತ್ತು ಮ್ಯಾನೇಜ್‌ಮೆಂಟ್, ಮಂಗಳೂರು

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಯಾವುದೇ ಕಾಲೇಜನ್ನು ಕ್ಯಾಪಿಟೇಷನ್ ಆಧಾರಿತ ಕಾಲೇಜೆಂದು ಮಂಜೂರು ಮಾಡುವುದಿಲ್ಲವೆಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೆ ಎಷ್ಟು ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ ? ಆ ಕಾಲೇಜುಗಳು ಯಾವುವು ?

ಶ್ರೀ ಜೀವರಾಜ ಆಳ್ವ.— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಅನುಬಂಧದಲ್ಲಿ ಕೊಡಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಕ್ಯಾಪಿಟೇಷನ್ ರದ್ದತಿಯ ಕಾಯ್ದೆ ಜಾರಿಗೆ ಬಂದಿದ್ದು ೧೯೮೪ನೇ ಇಸವಿಯಲ್ಲಿ. ಆದರೂ ದಿನಾಂಕ ೧೧-೭-೧೯೮೮ರವರೆವಿಗೂ ಕ್ಯಾಪಿಟೇಷನ್ ಅನ್ನು ಸಾರಾಸಗಟಾಗಿ ವಸೂಲಿ ಮಾಡಿದ್ದಾರೆ. ಇದಕ್ಕೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ ದಿನಾಂಕ ೧೧-೭-೧೯೮೮ರ ಕಾಯ್ದೆಗೆ ಅನುಗುಣವಾಗಿ ಸರ್ಕಾರ ನಡೆದುಕೊಳ್ಳುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ನಮ್ಮ ಉನ್ನತ ಶಿಕ್ಷಣ ಸಚಿವರು ಮಾತನಾಡುತ್ತಾ ಹೇಳಿದರು ಈ ಕಾಯ್ದೆ ೧೧-೭-೧೯೮೮ ರಿಂದ ಜಾರಿಗೆ ಬಂದಿದೆ ಎಂದು. ಆದರೆ ಈ ಮೊದಲೇ ನಾವು ಈ ಸಭೆಯಲ್ಲಿ ಕಾಯ್ದೆಯನ್ನು ಪಾಸು ಮಾಡಿ ಕೊಟ್ಟಿದ್ದೇವೆ. ಆಗಲೇ ಅದು ಜಾರಿಗೆ ಬಂದಿದೆ.

ಶ್ರೀ ಜೀವರಾಜ ಆಳ್ವ.—ಪಾಸಾಗಿದೆ. ಆದರೆ ಎಫೆಕ್ಟ್‌ಗೆ ಬಂದಿರುವುದು ೧೧-೭-೧೯೮೮ ರಿಂದ.

ಅಲ್ಪ ಸಂಖ್ಯಾತರ ಸಂಸ್ಥೆಗಳಲ್ಲಿ ಭಾಷಾ ಸೂಚನೆಗಳನ್ನು ಬೋಧಿಸುವುದು

೧೨೯೯. ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಲ್ಪ ಸಂಖ್ಯಾತರ ಸಂಸ್ಥೆಗಳಲ್ಲಿ ಭಾಷಾ ಸೂಚನೆಗಳನ್ನು ಬೋಧಿಸುವ ಬಗ್ಗೆ ಸರ್ಕಾರದ ನೀತಿಗಳೇನು ?

ಆ) ಕೆ.ಜಿ.ಎಫ್.ನಲ್ಲಿ ಅತಿ ಹೆಚ್ಚಿನ ವಿದ್ಯಾರ್ಥಿಗಳು ಕೆಳಗಿನ ಶಾಲೆಗಳಲ್ಲಿ ಜಾಸ್ತಿಯಾಗಿ ತಮಿಳು ತೆಲುಗು ಭಾಷೆಗಳನ್ನು ಮಾತ್ರ ಅಭ್ಯಾಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಕೆ.ಜಿ.ಎಫ್.ನಲ್ಲಿ ಪ್ರೌಢ ಶಾಲೆಗಳಲ್ಲಿ ಇಂಗ್ಲೀಷನ್ನು ಬೋಧಿಸುವುದಕ್ಕೆ ಸರ್ಕಾರ ಅನುಮತಿ ಕೊಟ್ಟಿದೆಯೇ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಯವರು).—

ಅ) ಪ್ರಾಥಮಿಕ ಹಂತದಲ್ಲಿ ಅವರವರ ಮಾತೃ ಭಾಷೆಗಳಲ್ಲಿ ಅಧಿಸೂಚನೆಗಳನ್ನು ಕೊಡುವ ಬಗ್ಗೆ ಅವಕಾಶವನ್ನು ಮಾಡಲ್ಪಟ್ಟಿದೆ.